# Managing Director, Hubballi-Dharwad Smart City Limited, Hubballi

ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ:ಎಚ್‌ಡಿಎಸ್‌ಸಿಎಲ್/ಆಡಳಿತ/2018–19 ದಿನಾಂಕ : 24–01–2019

## ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯಲ್ಲಿ ಪ್ರಮುಖ ಹುದ್ದೆಗಳಿಗೆ ಗುತ್ತಿಗೆ ಅಡಿಯಲ್ಲಿ ಕೆಲಸ ನಿರ್ವಹಿಸಲು ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ಸಾರ್ವಜನಿಕ ಪ್ರಕಟಣೆ

**ಜಾಹೀರಾತು ಸಂಖ್ಯೆ : 55/2018–19 ದಿನಾಂಕ : 24-01-2019**

ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿಯು ಕೇಂದ್ರ ಸರ್ಕಾರದ ಸ್ಮಾರ್ಟಸಿಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ವಿಶೇಷ ವಾಹಕ ಸಂಸ್ಥೆಯಾಗಿ ಸಾರ್ವಜನಿಕ ಕಂಪನಿ ಕಾಯ್ದೆ 2013 ರ ಅಡಿಯಲ್ಲಿ ನೊಂದಾಯಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿದೆ. ಉದ್ದೇಶಿತ ಸಂಸ್ಥೆಯಲ್ಲಿ ಪ್ರಮುಖ ಹುದ್ದೆಗಳಿಗೆ ಗುತ್ತಿಗೆ ಅಡಿಯಲ್ಲಿ 2 ವರ್ಷದ ಅವಧಿಗೆ ಕಾರ್ಯನಿರ್ವಹಿಸಲು ಹಾಗೂ ಒಂದು ವರ್ಷದ ಅವಧಿ ಮೀರದಂತೆ ಮುಂದುವರೆಸಲು (ಕಾರ್ಯನಿರ್ವಹಣೆ ಮತ್ತು ಯೋಜನೆಗೆ ಅವಶ್ಯಕತೆಗೆ ಅನುಗುಣವಾಗಿ) ಅರ್ಹ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಅವಶ್ಯಕ ದಾಖಲೆಗಳೊಂದಿಗೆ ದಿ : **08–02–2019** ರ ಒಳಗಾಗಿ ಈ ಕಚೇರಿಗೆ ತಲುಪುವಂತೆ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ. ಗುತ್ತಿಗೆ ಅವಧಿಯಲ್ಲಿ ಯೋಜನಾ ಸಲಹಾ ಶುಲ್ಕವನ್ನಾಗಿ ಲಮ್‌ಸಮ್ ಮೊತ್ತವನ್ನು ಪಾವತಿಸಲಾಗುವುದು.

**ಆಹ್ವಾನಿಸಿದ ಪ್ರಮುಖ ತಾಂತ್ರಿಕ ಹುದ್ದೆಗಳು :**

**1._ಉಪ ಪ್ರಧಾನ ವ್ಯವಸ್ಥಾಪಕರು (01) :**
- ಬಿ. ಇ. ಸಿವಿಲ್ ಇಂಜಿನಿಯರಿಂಗ್
- ಕನಿಷ್ಟ 10 ರಿಂದ 12 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.
- ನಿವೃತ್ತ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಕೆಸಿಎಸ್‌ಆರ್ ನಿಯಮ 313(ಬಿ) ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**2. ಹಿರಿಯ ತಾಂತ್ರಿಕ ಸಹಾಯಕರು (02) :**
- ಬಿ. ಇ. ಸಿವಿಲ್ ಇಂಜಿನಯರಿಂಗ್
- ಕನಿಷ್ಟ 5 ರಿಂದ 8 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.
- ಇ–ಪ್ರಕ್ಯೂರಮೆಂಟ್ ಅಡಿಯಲ್ಲಿ ಸಂಪೂರ್ಣ ಅನುಭವ ಹೊಂದಿರತಕ್ಕದ್ದು.

**3. ತಾಂತ್ರಿಕ ಸಹಾಯಕರು (04) :**
- ಬಿ. ಇ. ಸಿವಿಲ್ ಇಂಜಿನಿಯರಿಂಗ್
- ಕನಿಷ್ಟ 3 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.
- ಇ–ಪ್ರಕ್ಯೂರಮೆಂಟ್ ಅಡಿಯಲ್ಲಿ ಸಂಪೂರ್ಣ ಅನುಭವ ಹೊಂದಿರತಕ್ಕದ್ದು.

**4. ವ್ಯವಸ್ಥಾಪಕರು ಪ್ರಕ್ಯೂರಮೆಂಟ್ (01) :**
- ಸ್ನಾತಕೋತ್ತರ ಪದವಿ ಎಮ್.ಬಿ.ಎ/ಬಿ.ಇ. ಸಿವಿಲ್ ಇಂಜಿನೀರಿಂಗ್ ನುರಿತ ಪ್ರಕ್ಯೂರಮೆಂಟ್ ಅನುಭವ
- ಕನಿಷ್ಟ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.
- ಇ–ಪ್ರಕ್ಯೂರಮೆಂಟ್ ಅಡಿಯಲ್ಲಿ ಸಂಪೂರ್ಣ ಅನುಭವ ಹೊಂದಿರತಕ್ಕದ್ದು.
- ನಿವೃತ್ತ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು ಕೆಸಿಎಸ್‌ಆರ್ ನಿಯಮ 313(ಬಿ) ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**5. ವ್ಯವಸ್ಥಾಪಕರು ಸಾರ್ವಜನಿಕ ಸಂಪರ್ಕ/ಮಾನವ ಸಂಪನ್ಮೂಲ (01) :**
- ಸ್ನಾತಕೋತ್ತರ ಪದವಿ/ಮಾಸ್ ಕಮ್ಯುನಿಕೇಶನ್ /ಜರ್ನಲಿಜಮ್‌ಗಳಲ್ಲಿ ಸ್ನಾತಕೋತ್ತರ ಪದವಿ
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**6. ಸಮಾಜ ಕಲ್ಯಾಣ ಅಭಿವೃದ್ಧಿ ಅಧಿಕಾರಿ (01) :**
- ಎಮ್.ಎಸ್.ಡಬ್ಲ್ಯೂ/ಮಾಸ್ ಕಮ್ಯೂನಿಕೇಶನ್‌ಗಳಲ್ಲಿ ಸ್ನಾತಕೋತ್ತರ ಪದವಿ
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಿದ್ಯುತ್ (01) :**
- ಬಿ.ಇ. ಇಲೆಕ್ಟ್ರೀಕಲ್ ಇಂಜಿನಿಯರಿಂಗ್
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**8. ಸಹಾಯಕ ತೋಟಗಾರಿಕೆ ಅಧಿಕಾರಿ (01) :**
- ಎಮ್.ಎಸ್.ಸಿ. ತೋಟಗಾರಿಕೆ ಸ್ನಾತಕೋತ್ತರ ಪದವಿ
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.
- ನಿವೃತ್ತ ತೋಟಗಾರಿಕೆ ಇಲಾಖೆಯ ಸಹಾಯಕ ಅಧಿಕಾರಿಗಳು ಕೆಸಿಎಸ್‌ಆರ್ ನಿಯಮ 313(ಬಿ) ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**9. ಮ್ಯಾನೇಜರ್ ಸ್ಟ್ರಕ್ಚರ್ (01) :**
- ಮಾಸ್ಟರ್ ಇನ್ ಸ್ಟ್ರಕ್ಚರಲ್ ಇಂಜಿನೀಯರಿಂಗ್
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**10. ವ್ಯವಸ್ಥಾಪಕರು ನಗರ ಯೋಜನೆ (01) :**
- ಬ್ಯಾಚುಲರ್ ಡಿಗ್ರಿ ಇನ್ ಅರ್ಬನ್ ಪ್ಲ್ಯಾನಿಂಗ್ ಅಥವಾ ಎಮ್.ಯುಎಸ್ ಮತ್ತು ಬ್ಯಾಚುಲರ್ ಸಿವಿಲ್ ಇಂಜಿನೀಯರಿಂಗ್/ಆರ್ಕಿಟೆಕ್ಟ/ಯೋಜನೆ
- ಕನಿಷ್ಟ 3 ರಿಂದ 5 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**11. ವ್ಯವಸ್ಥಾಪಕರು ನಗರ ವಿನ್ಯಾಸ ತಜ್ಞರು (01) :**
- ಮಾಸ್ಟರ್ ಇನ್ ಆರ್ಕಿಟೆಕ್ಚರ್/ಅರ್ಬನ್ ಡಿಜೈನ್ ಅಥವಾ ಬ್ಯಾಚುಲರ್ ಇನ್ ಆರ್ಕಿಟೆಕ್ಚರ್
- ಕನಿಷ್ಟ 5 ರಿಂದ 8 ವರ್ಷ ಸೇವಾ ಪರಿಣಿತಿ ನಗರ ಯೋಜನೆಗಳಲ್ಲಿ ಕೆಲಸದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**12. ಹಣಕಾಸು ತಜ್ಞರು/ಹಣಕಾಸು ಸಲಹೆಗಾರರು (01) :**
- ಮಾಸ್ಟರ್ ಡಿಗ್ರಿ ಇನ್ ಫೈನಾನ್ಸ್/ಚಾರ್ಟಡ್ ಅಕೌಂಟೆಂಟ್/ಐಸಿಡಬ್ಲ್ಯೂಎ
- ಕನಿಷ್ಟ 5 ರಿಂದ 8 ವರ್ಷ ಸೇವಾ ಪರಿಣಿತಿ ಕಾರ್ಪೋರೇಟ್ ಸಂಸ್ಥೆಗಳಲ್ಲಿ ಕೆಲಸದ ನಿರ್ವಹಿಸಿದ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**13. ಕಂಪ್ಯೂಟರ್ ಆಪರೇಟರ್ ಮತ್ತು ವೆಬ್ ಡಿಜೈನರ್ (01) :**
- ಯಾವುದೇ ಪದವಿ ಅಥವಾ ಡಿಪ್ಲೋಮಾ ಜೊತೆಗೆ ಕಂಪ್ಯೂಟರ್ ಅಪ್ಲಿಕೇಶನ್/ವೆಬ್ ಅಪ್ಲಿಕೇಶನ್, ಡಿಜೈನ್, ಫೋಟೋಶಾಪ್, ಕೋರಲ್ ಡ್ರಾ, ಪೇಜ್ ಮೇಕರ್ ಮತ್ತು ಡಿಟಿಪಿ ಅನುಭವ
- ಕನಿಷ್ಟ 5 ವರ್ಷ ಸೇವಾ ಪರಿಣಿತಿಯನ್ನು ಅಪ್ಲಿಕೇಶನ್/ವೆಬ್ ಅಪ್ಲಿಕೇಶನ್, ಡಿಜೈನ್, ಫೋಟೋಶಾಪ್, ಕೋರಲ್ ಡ್ರಾ, ಪೇಜ್ ಮೇಕರ್ ಮತ್ತು ಡಿಟಿಪಿ ಅನುಭವ ಹೊಂದಿರುವುದು.
- ಕಾರ್ಯನಿರ್ವಹಣೆ ಹಾಗೂ ಇತರ ವಿಶೇಷ ಪರಿಣಿತ ಅನುಭವವನ್ನು ಪರಿಗಣಿಸಲಾಗುವುದು.

**ಶರತ್ತು ಮತ್ತು ನಿಯಮಗಳು :**

1. ಆಸಕ್ತ ಅಭ್ಯರ್ಥಿಗಳು ತಮ್ಮ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅಪ್ಲಿಕೇಶನ್ ಫಾರ್ಮನೊಂದಿಗೆ ಇ–ಮೇಲ್ ಮಾಡಬಹುದು. ಸದರಿ ಅಪ್ಲಿಕೇಶನ್ ಫಾರ್ಮ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. **www.hubballidharwadsmartcity.com** ಮತ್ತು ಇಮೇಲ್ ಮೂಲಕ **smartcityhubballidharwad@gmail.com** ಗೆ ಕಳುಹಿಸಬಹುದು.
2. ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಆಯ್ಕೆ ಸಮಿತಿಯ ಮುಖಾಂತರ ಸಂದರ್ಶನ ಜರುಗಿಸಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಲಾಗುವುದು.
3. ಅರ್ಜಿದಾರರು ಹುದ್ದೆಗೆ ಅನುಗುಣವಾಗಿ ಶಿಕ್ಷಣ, ಅನುಭವ ಮತ್ತು ಇತರ ದಾಖಲೆಗಳನ್ನು ಎರಡು ಪ್ರತಿಗಳಲ್ಲಿ ಸ್ವಂತ ದೃಢೀಕರಣದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್, 4ನೇ ಮಹಡಿ, 'ಎಫ್' ಬ್ಲಾಕ್, ಐಟಿ ಪಾರ್ಕ, ಹುಬ್ಬಳ್ಳಿ ಕರ್ನಾಟಕ ಈ ಕಚೇರಿಗೆ ದಿ: 08–02–2019 ರ ಒಳಗಾಗಿ ತಲುಪುವಂತೆ ಹೆಚ್ಚಿನ ವಿವರಗಳಿಗಾಗಿ ಕಚೇರಿ ದೂರವಾಣಿ ಸಂಖ್ಯೆ ನಂ. 0836–2355322 ಅಥವಾ 2355331 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
4. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಆಹ್ವಾನಿಸಿದ ಎಲ್ಲ ಹುದ್ದೆಗಳು ಗುತ್ತಿಗೆ ಆಧಾರಿತ ಹುದ್ದೆಗಳಾಗಿದ್ದು, ಒಟ್ಟು ಯೋಜನೆಗೆ ಮತ್ತು ಕಾರ್ಯನಿರ್ವಹಣೆಗೆ ಅನುಸಾರವಾಗಿ ಲಮ್‌ಸಮ್ ಮೊತ್ತವನ್ನು ಪಾವತಿಸಲಾಗುವುದು.

**ಸಹಿ/– ವ್ಯವಸ್ಥಾಪಕ ನಿರ್ದೇಶಕರು,**
**ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್ ಹುಬ್ಬಳ್ಳಿ**